**4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು**

**ಸಿಸಿ ನಂ. 7739/2016 ಚಾಸಾಃ 7 ಪ್ರಾಸಾಃ 1**

| | | |
|---|---|---|
| ಸಾಕ್ಷಿದಾರರ ಹೆಸರು | : | ಜಯಲಕ್ಷ್ಮಿ ಚೌಹಣ್ |
| ಗಂಡನ ಹೆಸರು | : | ಅಶೋಕ್ ಕುಮಾರ್ ಚೌಹಣ್ |
| ವಯಸ್ಸು | : | 65 ವರ್ಷ |
| ವೃತ್ತಿ | : | ನಿವೃತ್ತ ಬ್ಯಾಂಕ್ ಮ್ಯಾನೇಜರ್ |
| ವಾಸ | : | ಉಲ್ಲಾಳು, ಬೆಂಗಳೂರು |

**ಸಾಕ್ಷಿಯನ್ನು ದಿಃ 25.03.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸಾ.ಸ.ಅ ರವರಿಂದಃ-**

ನಾನು 2014 ರಿಂದ 2017 ರವರೆಗೆ ನಾಗದೇವನಹಳ್ಳಿ ಎಸ್.ಬಿ.ಐ ಬ್ಯಾಂಕ್ ಶಾಖೆಯಲ್ಲಿ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಣೆ ಮಾಡಿರುತ್ತೇನೆ. ದಿಃ23.05.2015 ರಂದು ಕೆಂಗೇರಿ ಪೊಲೀಸರಿಂದ ಆರೋಪಿ ಲಿಂಗೇಗೌಡ ರವರಿಗೆ ಸಂಬಂಧಿಸಿದ ಬ್ಯಾಂಕ್ ಖಾತೆಯ ಬ್ಯಾಂಕ್ ಸ್ಟೇಟ್ ಮೆಂಟ್ ಮತ್ತು ಖಾತೆ ತೆರೆಯಲು ಸಲ್ಲಿಸಿದ್ದ ದಾಖಲಾತಿಗಳನ್ನು ನೀಡುವಂತೆ ಕೋರಿದ್ದರು. ಸದರಿ ಕೋರಿಕೆ ಪತ್ರವನ್ನು ಸಾಕ್ಷಿದಾರರು ನೋಡಿ ಗುರ್ತಿಸಿದ್ದು ಅದನ್ನು ನಿಪಿ-1 ಎಂದು ಗುರ್ತಿಸಲಾಯಿತು. ನಾನು ಆರೋಪಿಗೆ ಸಂಬಂಧಿಸಿದ ಖಾತೆಯ ಸ್ಟೇಟ್ ಮೆಂಟ್ ಆಫ್ ಅಕೌಂಟ್ ಪ್ರತಿಯನ್ನು ದೃಢೀಕರಿಸಿ ಕೊಟ್ಟಿರುತ್ತೇನೆ. ಸದರಿ ಪ್ರತಿಯನ್ನು ನಿಪಿ-2 ಎಂದು ಗುರ್ತಿಸಲಾಯಿತು. ಚಾಸಾ-1 ಮತ್ತು ಆರೋಪಿಯ ನಡುವೆ ಜಮೀನಿನ ಸಂಬಂಧ ವಿವಾದ ಉಂಟಾಗಿತ್ತು ಎಂದು ತಿಳಿದುಕೊಂಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಕೆ.ಎನ್.ಕೆ ವಕೀಲರಿಂದಃ**

ನಾನು ಸದರಿ ಬ್ಯಾಂಕಿನಲ್ಲಿ ವ್ಯವಸ್ಥಾಪಕಳಾಗಿ ಕರ್ತವ್ಯ ನಿರ್ವಹಣೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-2 ರ ಸ್ಟೇಟ್ ಮೆಂಟ್ ಆಫ್ ಅಕೌಂಟ್ ಈ ಪ್ರಕರಣಕ್ಕೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ಚಾಸಾ-1 ರವರು ನೀಡಿದ

ಏನು ವ್ಯವಹಾರ ನಡೆದಿದೆ ಎಂದು ನನಗೆ ಗೊತ್ತಿಲ್ಲ. ಯಾವ ಉದ್ದೇಶಕ್ಕೆ ಸ್ಟೇಟ್ ಮೆಂಟ್ ಆಫ್ ಅಕೌಂಟ್ ತೆಗೆದುಕೊಂಡರು ಎಂದು ಗೊತ್ತಿಲ್ಲ. ನನಗೆ ಆರೋಪಿಯ ಸಂಬಂಧ ವಿಚಾರಗಳು ಗೊತ್ತಿಲ್ಲ.  ಯಾವ ವಿಚಾರಗಳು ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**